**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**
**ಸಕಲೇಶಪುರ**
**C.C.No.677/2018**

| | | |
|---|---|---|
| **ಹೆಸರುಃ** | **ಭರತ್ ಎಸ್ ಎಸ್** | **CW- 18** |
| **ತಂದೆ/ಗಂಡ ಹೆಸರುಃ** | **ಎಸ್ ಪಿ ಸತ್ಯನಾರಾಯಣ** | **PW- 15** |
| **ವಯಸ್ಸುಃ** | **41 ವರ್ಷ** | |
| **ವೃತ್ತಿಃ** | **ವ್ಯವಹಾರ** | |
| **ವಿಳಾಸಃ** | **ಸಕಲೇಶಪುರ** | **ದಿನಾಂಕಃ 03.08.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

2018 ರಲ್ಲಿ ನಾನು ಸಕಲೇಶಪುರದ ಮುತ್ತೂಟ್ ಪಿನ್ ಕಾಫ್ ಕಂಪನಿಯಲ್ಲಿ ಶಾಖಾ ಮ್ಯಾನೇಜರ್ ಆಗಿ ಕೆಲಸ ಮಾಡಿರುತ್ತೇನೆ. ನನಗೆ ಚಾಸಾ 15 ಮತ್ತು 16 ರವರ ಪರಿಚಯವಿರುತ್ತದೆ. ನನಗೆ ಆರೋಪಿಯ ಪರಿಚಯವಿರುತ್ತದೆ. ಸಾಕ್ಷಿಯು ನಿ ಪಿ 27 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 27 ಬಿ ಎಂದು ಗುರುತಿಸಲಾಯಿತು. ದಿಃ 17.05.2018 ರಂದು ಪೊಲೀಸರು ನಮ್ಮ ಕಂಪನಿಗೆ ರಾಜು ಎಂಬ ಆರೋಪಿಯನ್ನು ಕರೆದುಕೊಂಡು ಪಂಚರಾದ ಚಾಸಾ 15 ಮತ್ತು 16 ರವರ ಜೊತೆ ಬಂದಿದ್ದರು. ಆರೋಪಿ ಬಾಳ್ಳುಪೇಟೆ ಯಲ್ಲಿ ಸಿ ಆರ್ ಎಸ್ ಫೈನಾನ್ಸ ಮತ್ತು ಗಿರವಿ ಅಂಗಡಿಯನ್ನು ನೆಡೆಸುತ್ತಿದ್ದು, ಸಾರ್ವಜನಿಕರಿಂದ ಚಿನ್ನವನ್ನು ಅಡಮಾನ ಮಾಡಿಕೊಂಡು ಅವರಿಗೆ ಕಡಿಮೆ ಹಣ ಕೊಟ್ಟು, ಹೆಚ್ಚಿನ ಮೊತ್ತಕ್ಕಾಗಿ ನಮ್ಮ ಕಂಪನಿಯಲ್ಲಿ ಅಡಮಾನ ಮಾಡಿರುತ್ತಾರೆಂದು ಮತ್ತು ಗ್ರಾಹಕರಿಗೆ ಮೋಸ ಮಾಡಿರುತ್ತಾರೆಂದು ದೂರು ದಾಖಲಾಗಿದ್ದು, ಆ ಪ್ರಕಾರ ನಮ್ಮ ಕಂಪನಿಗೆ ಬಂದಿರುವುದಾಗಿ ತಿಳಿಸಿದರು. ಆ ಪ್ರಕಾರ ಚಿನ್ನಾಭರಣಗಳನ್ನು ಹಾಜರುಪಡಿಸುವಂತೆ ಕೇಳಿದರು. ಆರೋಪಿ ರಾಜು, ಅಶೋಕ ಮತ್ತು ಮಂಜುನಾಥ ಎಂಬ ಹೆಸರಿನಲ್ಲಿ ಒಡವೆಗಳನ್ನು ಗಿರವಿ ಇಟ್ಟಿದ್ದರು. ನಾನು ನಮ್ಮ ಮೇಲಾಧಿಕಾರಿಗಳ ಪರವಾನಗಿ ಪಡೆದು ಅಂದಾಜು 300 ಗ್ರಾಂ

ಚಿನ್ನಾಭರಣಗಳನ್ನು ಪೊಲೀಸರಿಗೆ ಹಸ್ತಾಂತರಿಸಿರುತ್ತೇನೆ. ಆ ಪ್ರಕಾರ ಪೊಲೀಸರು ಬೆಳಿಗ್ಗೆ 11 ರಿಂದ 12.30 ರ ವರೆಗೆ ನಮ್ಮ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು, ಚಾಸಾ 15 ಮತ್ತು 16 ರವರು ಹಾಜರಿದ್ದರು. ನಾನು ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ಆರೋಪಿ ಗೈರುಹಾಜರಿದ್ದು ಅವರ ಗುರುತಿಸುವಿಕೆಗೆ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಕೆ ಎಂ ವಕೀಲರಿಂದಃ**

ನಾನು ಮುತ್ತೂಟ್ ಪಿನ್ ಕಾರ್ಪ್ ಕಂಪನಿಯಲ್ಲಿ *2011* ರಿಂದ *2021* ರ ವರೆಗೆ ಮ್ಯಾನೇಜರ್ ಆಗಿ ಕೆಲಸ ಮಾಡಿರುತ್ತೇನೆ. ನಾನು ಕೆಲಸಕ್ಕೆ ಸೇರಿದ ನಿಖರವಾದ ದಿನಾಂಕ ನೆನಪಿಲ್ಲ. ಪೊಲೀಸರು ನನಗೆ ನೋಟೀಸ್ ಜಾರಿ ಮಾಡಿರುವುದಿಲ್ಲ. ಆದರೆ ಆರೋಪಿಯನ್ನು ಕರೆದುಕೊಂಡು ನಮ್ಮ ಕಚೇರಿಗೆ ಬಂದಿದ್ದರು. *300* ಗ್ರಾಂ ಚಿನ್ನಾಭರಣ ವಿವಿಧ ರೀತಿಯ ಆಭರಣಗಳಾಗಿದ್ದು ಯಾವುದು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಎಷ್ಟು ಸಂಖ್ಯೆಯ ಚಿನ್ನಾಭರಣ ಎಂದು ನೆನಪಿಲ್ಲ. ಯಾರ ಯಾರ ಖಾತೆಯಿಂದ ಎಷ್ಟು ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಂಡಿರುತ್ತಾರೆಂದು ನಿಖರವಾಗಿ ಹೇಳಲು ಆಗುವುದಿಲ್ಲ. ರಾಜು , ಮಂಜುನಾಥ ಮತ್ತು ಅಶೋಕ ರವರ ಖಾತೆಯ ದಾಖಲಾತಿಗಳನ್ನು ಪೊಲೀಸರು ತೆಗೆದುಕೊಂಡು ಬಂದಿದ್ದರು. ನನ್ನಿಂದ ಯಾವುದೇ ದಾಖಲಾತಿ ಪಡೆದಿಲ್ಲ. ನಾನು ಸ್ಥಳದಲ್ಲಿ ಪಂಚನಾಮೆಗೆ ಒಂದು ಸಹಿ ಮಾಡಿರುತ್ತೇನೆ. ಆರೋಪಿ ಮತ್ತು ಚಾಸಾ *15, 16* ರವರ ವಿಳಾಸ ಗೊತ್ತಿಲ್ಲ. ಆರೋಪಿ ಸಾರ್ವಜನಿಕರಿಂದ ಎಷ್ಟು ಮೊತ್ತಕ್ಕೆ ಅಡಮಾನ ಪಡೆದುಕೊಂಡಿರುತ್ತಾರೆ ಮತ್ತು ನಮ್ಮಲ್ಲಿ ಎಷ್ಟು ಮೊತ್ತಕ್ಕೆ ಚಿನ್ನಾಭರಣಗಳನ್ನು ಅಡಮಾನ ಮಾಡಿರುತ್ತಾರೆಂದು ಈಗ ನೆನಪಿಲ್ಲ. ದಾಖಲಾತಿಗಳನ್ನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ.

ಚಿನ್ನಾಭರಣಗಳು ಯಾರು ಯಾರಿಗೆ ಸೇರಿರುತ್ತದೆಂದು ನನಗೆ ಗೊತ್ತಿಲ್ಲ. ಮಂಜುನಾಥ , ಅಶೋಕ ಮತ್ತು ರಾಜು ರವರ ಖಾತೆಗಳಿಂದ ಪ್ರತ್ಯೇಕವಾಗಿ ಎಷ್ಟು ಎಷ್ಟು ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡರು ಎಂದು ಗೊತ್ತಿಲ್ಲ. ಚಿನ್ನ ಅಡಮಾನ

ಮಾಡಿಕೊಳ್ಳುವಾಗ ಗ್ರಾಹಕರ ಆಧಾರ ಕಾರ್ಡ್ ಮತ್ತು ಪಾನ್ ಕಾರ್ಡ ಪಡೆದು ಅವರಿಗೆ ಸಂಬಂಧ ಪಟ್ಟ ಚಿನ್ನಾಭರಣಗಳನ್ನು ಅಡಮಾನ ಮಾಡಿಕೊಳ್ಳುತ್ತೇವೆಂದರೆ ಸರಿ. ದಾಖಲಾತಿಗಳು ಇಲ್ಲದೇ ಬರುವ ಗ್ರಾಹಕರ ಚಿನ್ನಾಭರಣಗಳನ್ನು ಅಡಮಾನ ಮಾಡಿಕೊಳ್ಳುವುದಿಲ್ಲ ಎಂದರೆ ಸರಿ. ಆರೋಪಿಯಿಂದ ಯಾವುದೇ ಚಿನ್ನಾಭರಣ ಅಡಮಾನ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಎಷ್ಟು ಜನರ ವಿರುದ್ದ ಪ್ರಕರಣ ದಾಖಲು ಮಾಡಿರುತ್ತಾರೆಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಚಿನ್ನಾಭರಣ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ನಾನು ಠಾಣೆಯಲ್ಲಿ ಸಹಿ ಮಾಡಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ**
**ಸಕಲೇಶಪುರ**